# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 205 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12-08-2025 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿಯಿಂದ ನಿರ್ವಹಿಸಲಾದ ಕಾಮಗಾರಿಗಳು ಅಸಮರ್ಪಕವಾಗಿ ಇದ್ದು. ಯಾವುದೇ ಕಾಮಗಾರಿಗಳು ಪೂರ್ಣಗೊಳ್ಳದೇ ಜನರಿಗೆ ಪ್ರಯೋಜನ ಆಗಿರುವುದಿಲ್ಲ ಎಂಬ ದೂರುಗಳಿದ್ದು. ಇದನ್ನು ತನಿಖೆ ನಡೆಸಲಾಗಿದೆಯೇ: ಈ ಬಗ್ಗೆ ವರದಿಗಳು ಬಂದಿದೆಯೇ: (ವಿವರ ನೀಡುವುದು) | ಸ್ಮಾರ್ಟ್‌ಸಿಟಿ ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಮಂಗಳೂರು ಪಾಲಿಕೆಯ ಪರಿಷತ್ತಿನಲ್ಲಿ ಚರ್ಚಿಸಿ, ಶಿಫಾರಸ್ಸುಗೊಂಡ ನಂತರ ರಾಜ್ಯ ಮಟ್ಟದ ಉನ್ನತ ಸಂಚಾಲನ ಸಮಿತಿ ಹಾಗೂ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದಿಂದ ಅನುಮೋದನೆಗೊಂಡಿದ್ದು, ಅದರಂತೆ ಕಾಮಗಾರಿಗಳ ಅನುಷ್ಠಾನವನ್ನು ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿರುತ್ತದೆ.<br><br>ಕಾಮಗಾರಿಗಳ ವಿಸ್ತೃತ ಯೋಜನಾ ವರದಿ ತಯಾರಿಕೆಗೆ ನುರಿತ ಯೋಜನಾ ಸಮಾಲೋಚಕರ ನೆರವು ಪಡೆದಿದ್ದು, ಈ ವಿಸ್ತೃತ ಯೋಜನಾ ವರದಿಗಳಿಗೆ ಸ್ಮಾರ್ಟ್ ಸಿಟಿ ನಿರ್ದೇಶಕರ ಮಂಡಳಿ, ತಾಂತ್ರಿಕ ಸಮಿತಿ, ಹಾಗೂ ರಾಜ್ಯ ಉನ್ನತ ಮಟ್ಟದ ಸಂಚಾಲನಾ ಸಮಿತಿಗಳಲ್ಲಿ ಈ ಕಾಮಗಾರಿಗಳು ಅನುಮೋದನೆಗೊಂಡಿರುತ್ತವೆ.<br><br>ಕಾಮಗಾರಿಗಳು ಪ್ರಗತಿಯಲ್ಲಿರುವಾಗ ಕಾಲಕಾಲಕ್ಕೆ ಲೋಕಸಭಾ ಸದಸ್ಯರು ಹಾಗೂ ಶಾಸಕರ ಅಧ್ಯಕ್ಷತೆಯಲ್ಲಿ ನಾಗರಿಕ ಮಟ್ಟದ ಸಲಹಾ ವೇದಿಕೆಯಲ್ಲಿ ಕಾಮಗಾರಿಗಳ ಬಗ್ಗೆ ಕುಲಂಕುಶವಾಗಿ ಚರ್ಚೆ ನಡೆಸಿ, ಈ ಸಮಿತಿಯು ನೀಡಿರುವ ಸೂಕ್ತ ಸಲಹೆಗಳನ್ನು ಕಾಮಗಾರಿಗಳಲ್ಲಿ ಅಳವಡಿಸಲಾಗಿದೆ.<br><br>ಸ್ಮಾರ್ಟ್ ಸಿಟಿ ಯೋಜನೆಯಡಿ ಮಂಗಳೂರು ನಗರದಲ್ಲಿ ರೂ.967.43 ಕೋಟಿ ಮೊತ್ತದ 56 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇವುಗಳ ಪೈಕಿ 50 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಪೂರ್ಣಗೊಂಡ ಕಾಮಗಾರಿಗಳಿಗೆ ರೂ.723.33 ಕೋಟಿ ವೆಚ್ಚ ಮಾಡಲಾಗಿರುತ್ತದೆ.<br><br>ಪೂರ್ಣಗೊಂಡ ಕಾಮಗಾರಿಗಳ ಪೈಕಿ ಪ್ರಮುಖವಾಗಿ 30ಕಿ.ಮಿ. ವಿಸ್ತೀರ್ಣದ ರಸ್ತೆಗಳು, 40ಕಿ.ಮಿ. ಒಳಚರಂಡಿ ಜಾಲ, ವೆನ್ಲಾಕ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಕಟ್ಟಡ, ಸರ್ಕಾರಿ ಶಾಲೆಗಳ ಉನ್ನತೀಕರಣ, ಕೆರೆಗಳ ಪುನಃಶ್ಚೇತನ, ಕದ್ರಿ ಪಾರ್ಕ್ ರಸ್ತೆ ನವೀಕರಣ, Command and Control Centre, ಎಮ್ಮೆಕೆರೆ ಈಜುಕೊಳ, ಉರ್ವಾ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲಾಗಿದೆ. ಎಮ್ಮೆಕೆರೆ ಈಜುಕೊಳದಲ್ಲಿ 77ನೇಯ ರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆ ಆಯೋಜನೆಗೊಂಡಿದ್ದು, ಈ ಈಜುಕೊಳ ಸಂಕೀರ್ಣ ಈಜುಗಾರರ ಪ್ರಶಂಸೆಗೆ ಪಾತ್ರವಾಗಿದೆ. ಅದೇ ರೀತಿ ಉರ್ವಾ ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಶಟಲ್ |

| | | |
|---|---|---|
| | | ಬ್ಯಾಡ್ಮಿಂಟನ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ವೆನ್ಲಾಕ್ ಅಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಪ್ರಕ್ರಿಯೆ ಆರಂಭಿಸಲಾಗಿದೆ. ಕದ್ರಿ ಪಾರ್ಕ್ ರಸ್ತೆಯಲ್ಲಿನ ಅಂಗಡಿಗಳು ಹಂತ ಹಂತವಾಗಿ ಪ್ರಾರಂಭಿಸಲಾಗಿದ್ದು, ವ್ಯಾಪಾರ ವಹಿವಾಟು ಆರಂಭಗೊಂಡಿದೆ. ಇದೇ ರೀತಿ ಪಾದಚಾರಿ ಪ್ಲಾಜಾದ ಅಂಡರ್‌ಪಾಸ್‌ನಲ್ಲಿ ಅಂಗಡಿ ಮುಂಗಟ್ಟುಗಳು ತೆರೆದುಕೊಂಡಿದೆ.<br><br>ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಕೆಲವೊಂದು ಕಾಮಗಾರಿಗಳು ಮಾನ್ಯ ಹಸಿರು ನ್ಯಾಯ ಮಂಡಳಿಯಿಂದ ಕಾಮಗಾರಿಗೆ ತಡೆಯಾಜ್ಞೆ, ಭೂಸ್ವಾಧೀನ ಕಾರ್ಯದಲ್ಲಿನ ವಿಳಂಬ,ಕಾರ್ಮಿಕರ ಕೊರತೆ ಇವುಗಳಿಂದ ವಿಳಂಬಗೊಂಡಿರುತ್ತದೆ.<br><br>ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಪರಿಮಾಣ ಹಾಗೂ ಗುಣಮಟ್ಟವನ್ನು ಪ್ರತಿ ಹಂತದಲ್ಲೂ ಪರೀಕ್ಷಿಸಿ ಖಚಿತಪಡಿಸಿಕೊಂಡು ದೃಢೀಕರಿಸಲು ಯೋಜನಾ ನಿರ್ವಹಣಾ ಸಮಾಲೋಚಕರನ್ನು (ಪಿಎಂಸಿ) ನೇಮಿಸಲಾಗಿದ್ದು, ಜೊತೆಗೆ ಸ್ಮಾರ್ಟ್ ಸಿಟಿ ಅಭಿಯಂತರರೂ ಸಹ ಅನುಷ್ಠಾನದ ಪ್ರತಿ ಹಂತದಲ್ಲೂ ಸಹ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ತಾಂತ್ರಿಕವಾಗಿ ದೃಢೀಕರಿಸಿರುತ್ತಾರೆ ಆಯಾಯಾ ಕಾಮಗಾರಿಗಳಿಗೆ ಅನ್ವಯವಾಗುವಂತಹ ಭಾರತೀಯ ಮಾನದಂಡ(IS), ನ್ಯಾಷನಲ್ ಬಿಲ್ಡಿಂಗ್ ಕೋಡ್ (NBC), ಕೇಂದ್ರ ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ಇಂಜಿನಿಯರಿಂಗ್ ಸಂಸ್ಥೆ (CPHEOO)ಗಳ ಮಾನದಂಡಗಳ ಅನುಸಾರವೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮುಂದುವರೆದು ನಿರ್ದಿಷ್ಟ ದೂರು ಸ್ವೀಕೃತವಾದ ಸಂಧರ್ಭಗಳಲ್ಲಿ ಕಾಮಗಾರಿಗಳ ಗುಣಮಟ್ಟವನ್ನು ಖಚಿತ ಪಡಿಸಿಕೊಳ್ಳಲು ಕಾಮಗಾರಿವಾರು 3ನೇ ವ್ಯಕ್ತಿಯ ತಪಾಸಣೆ ನಡೆಸುವ ಮೂಲಕ ಕ್ರಮವಹಿಸಲಾಗುತ್ತಿದೆ. |
| ಆ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕದ್ರಿ ಪಾರ್ಕ್ ಬಳಿ ನಿರ್ಮಿಸಲಾದ ಸಾರ್ವಜನಿಕ ಮಳಿಗೆಗಳನ್ನು 5 ವರ್ಷಗಳಿಂದ ಸಾರ್ವಜನಿಕರಿಗೆ ಬಳಕೆಗೆ ನೀಡದೆ ಸರ್ಕಾರದ ಹಣ ಪೋಲು ಮಾಡುತ್ತಿರುವ ಬಗ್ಗೆ ನಗರಪಾಲಿಕೆ ಕೈಗೊಂಡ ಕ್ರಮವೇನು: | ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಕದ್ರಿ ಉದ್ಯಾನವನ ಪ್ರದೇಶದಲ್ಲಿ 1 ಕಿ.ಮೀ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದ್ದು, ಈ ಕಾಮಗಾರಿಯಲ್ಲಿ ರಸ್ತೆ ಬದಿಯಲ್ಲಿ 38 ಅಂಗಡಿ ಮಳಿಗೆಗಳನ್ನು ಸಹ ನಿರ್ಮಿಸಲಾಗಿರುತ್ತದೆ. ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿ ಅನುಸಾರ ಅಂಗಡಿ ಮಳಿಗೆಗಳಿಂದ ಬರುವ ಬಾಡಿಗೆಯನ್ನು ಉಪಯೋಗಿಸಿಕೊಂಡು ರಸ್ತೆ ಹಾಗೂ ಅಂಗಡಿ ಮಳಿಗೆಗಳನ್ನು ನಿರ್ವಹಣೆ ಮಾಡುವ ಆದಾಯ ಮಾದರಿಯಲ್ಲಿ(Revenue Model)ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಟೆಂಡರ್ ಕರೆಯಲಾಗಿತ್ತು. ಆದರೆ ಅಂಗಡಿ ಮಳಿಗೆಗಳ ಇ-ಹರಾಜು ಹಾಗೂ ರಸ್ತೆಯ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಪ್ರತ್ಯೇಕ ಟೆಂಡರ್ ಕರೆಯಲು ನಿರ್ಣಯಿಸಲಾಗಿ ಅಂಗಡಿ ಮಳಿಗೆಗಳನ್ನು ದಿನಾಂಕ:17.02.2024 ರಂದು ಇ-ಹರಾಜು ಕರೆಯಲಾಗಿರುತ್ತದೆ ಹಾಗೂ ಕದ್ರಿ ಉದ್ಯಾನವನ ರಸ್ತೆ ನಿರ್ವಹಣೆಗೆ ದಿನಾಂಕ:05.07.2024 ರಂದು ಟೆಂಡರ್ ಕರೆಯಲಾಗಿರುತ್ತದೆ. ಅಂಗಡಿ ಮಳಿಗೆಗಳನ್ನು ಅರ್ಹ ಬಿಡ್ದಾರರಿಗೆ ದಿನಾಂಕ:19.08.2024ರಂದು ಹಂಚಿಕೆ ಮಾಡಲಾಗಿದ್ದು, ಈಗಾಗಲೇ 4 ಅಂಗಡಿ ಮಳಿಗೆಗಳನ್ನು ಪ್ರಾರಂಭಿಸಲಾಗಿರುತ್ತದೆ. |
| ಇ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಮಾರುಕಟ್ಟೆಗಳು ಖಾಲಿ ಇದ್ದು, ಸರಿಯಾಗಿ ಕಾರ್ಯನಿರ್ವಹಣೆ | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 26 ಮಾರುಕಟ್ಟೆಗಳು, 920 ಮಳಿಗೆಗಳಿರುತ್ತವೆ.<br><br>ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ವಿ.ನಂ. 5 ಕಾಟಿಪಳ್ಳ 6ನೇ ಬ್ಲಾಕ್ ಕೃಷ್ಣಾಪುರ ಮಾರುಕಟ್ಟೆ ಕಟ್ಟಡದ ಬಲಭಾಗದ ತಳ |

| | | |
|---|---|---|
| | ಮಾಡದೇ ಸರ್ಕಾರದ ಹಣ ಪೋಲು ಮಾಡುತ್ತಿರುವ ಬಗ್ಗೆ ನಗರಪಾಲಿಕೆ ಯಾವುದೇ ಕ್ರಮಕೈಗೊಳ್ಳದೇ ಇರುವುದು ಸರಿಯೇ: ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ: ಈ ಬಗ್ಗೆ ತೆಗೆದುಕೊಳ್ಳುವ ಕ್ರಮವೇನು? (ವಿವರ ನೀಡುವುದು) | ಅಂತಸ್ತು ಮತ್ತು ನೆಲ ಅಂತಸ್ತಿನ ಉಳಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕಾಮಗಾರಿ ಮುಗಿದ ಬಳಿಕ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು.<br><br>ಸುರತ್ಕಲ್ ಮಾರುಕಟ್ಟೆ ಸಂಕೀರ್ಣ ಕಟ್ಟಡದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ. ಕಾಮಗಾರಿ ಮುಗಿದ ಬಳಿಕ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು.<br><br>ಸುರತ್ಕಲ್ ತಾತ್ಕಾಲಿಕ ಮಾರುಕಟ್ಟೆಯ 247 ಮಳಿಗೆಗಳನ್ನು ಹಿಂದಿನ ಬಾಡಿಗೆದಾರರಿಗೆ ಹಾಲಿ ಬಾಡಿಗೆಯ ಮೇಲೆ ಶೇಕಡಾ 10% ಹೆಚ್ಚುವರಿ ಮಾಡಿ ಮುಂದುವರಿಸಲಾಗಿದೆ.<br><br>ಸುರತ್ಕಲ್ ಮೂಡಾ ಮಾರುಕಟ್ಟೆಯ 63 ಮಳಿಗೆಗಳನ್ನು ಹಿಂದಿನ ಬಾಡಿಗೆದಾರರಿಗೆ ಹಾಲಿ ಬಾಡಿಗೆಯ ಮೇಲೆ ಶೇಕಡಾ 10% ಹೆಚ್ಚುವರಿ ಮಾಡಿ ಮುಂದುವರಿಸಲಾಗಿದೆ.<br><br>ಕಾಟಿಪಳ್ಳ ಮಾರುಕಟ್ಟೆಯ 17 ಮಳಿಗೆಗಳನ್ನು ಹಾಲಿ ಬಾಡಿಗೆಯ ಮೇಲೆ ಶೇಕಡಾ 10% ಹೆಚ್ಚುವರಿ ಮಾಡಿ ಮುಂದುವರಿಸಲಾಗಿದೆ.<br><br>ಕುಳಾಯಿ ಮಾರುಕಟ್ಟೆಯ 17 ಮಳಿಗೆಗಳ ಪೈಕಿ 15 ಮಳಿಗೆಗಳು ಟೆಂಡರ್ ಪ್ರಕ್ರಿಯೆಯಲ್ಲಿದೆ ಮತ್ತು ಉಳಿದ 2 ಮಳಿಗೆಗಳನ್ನು ಹಾಲಿ ಬಾಡಿಗೆಯ ಮೇಲೆ ಶೇಕಡಾ 10% ಹೆಚ್ಚುವರಿ ಮಾಡಿ ಮುಂದುವರಿಸಲಾಗಿದೆ.<br><br>ಬೈಕಂಪಾಡಿ ಮಾರುಕಟ್ಟೆಯ 5 ಮಳಿಗೆಗಳು ಮತ್ತು ಹೊಸಬೆಟ್ಟು ಮಾರುಕಟ್ಟೆಯ 4 ಮಳಿಗೆಗಳು ಟೆಂಡರು ಪ್ರಕ್ರಿಯೆಯಲ್ಲಿದೆ.<br><br>ಸುರತ್ಕಲ್ ಕಚೇರಿ ಕಟ್ಟಡದ ನೆಲ ಅಂತಸ್ತಿನ 2 ಅಂಗಡಿ ಕೋಣೆಗಳನ್ನು ಟೆಂಡರು ಕರೆದು ಹಂಚಿಕೆ ಮಾಡಲಾಗಿದೆ.<br><br>ಸುರತ್ಕಲ್ ಬಸ್ಸು ತಂಗುದಾಣದ ವಾಣಿಜ್ಯ ಸಂಕೀರ್ಣದ 30 ಮಳಿಗೆಗಳ ಹಂಚಿಕೆಯ ಟೆಂಡರ್ ಪ್ರಕ್ರಿಯೆಯಲ್ಲಿದೆ.<br><br>ನವೀಕೃತ ಕದ್ರಿ ಮಾರುಕಟ್ಟೆಯ ತಳ ಅಂತಸ್ತಿನ 36 ಮಳಿಗೆಗಳು, ಹಾಗೂ ನೆಲ ಮತ್ತು 1ನೇ ಅಂತಸ್ತಿನ ತಲಾ 14 ಮಳಿಗೆಗಳು ಹರಾಜು ಕರೆದು ಹಂಚಿಕೆ ಮಾಡಲಾಗಿದೆ. 2 ಮತ್ತು 3 ನೇ ಅಂತಸ್ತಿನ ಕೊಠಡಿಗಳು ಮರು ಟೆಂಡರು ಪ್ರಕ್ರಿಯೆಯಲ್ಲಿದೆ.<br><br>ಮೂಡಾ ನಿಧಿಯಿಂದ ನಿರ್ಮಿಸಲ್ಪಟ್ಟ ಉರ್ವ ಮಾರುಕಟ್ಟೆ ಸಂಕೀರ್ಣದ 36 ಸ್ಟಾಲುಗಳ ಪೈಕಿ 5 ಸ್ಟಾಲುಗಳು ಮಾತ್ರ ಹಂಚಿಕೆಯಾಗಿದ್ದು, ಬಾಕಿ ಉಳಿದ ಸ್ಟಾಲುಗಳನ್ನು ಹಂಚಿಕೆ ಮಾಡಲು ಮೂರು ಬಾರಿ ಹರಾಜು ಕರೆಯಲಾಗಿದ್ದರೂ ಸಹ ಬಿಡ್ ದಾರರು ಭಾಗವಹಿಸಿರುವುದಿಲ್ಲ.ನವೀಕೃತ ಹೊಸ ಕಂಕನಾಡಿ ಮಾರುಕಟ್ಟೆಯ ನಿರ್ಮಾಣ ಪ್ರಗತಿಯಲ್ಲಿದ್ದು, ಪೂರ್ಣಗೊಂಡಿರುವ ನೆಲ ಅಂತಸ್ತಿನ 98 ಮಳಿಗೆಗಳನ್ನು ಹಂಚಿಕೆ ಮಾಡಲು ಟೆಂಡರು ಪ್ರಕ್ರಿಯೆ ಕೈಗೊಳ್ಳಲಾಗಿದೆ.<br><br>ಬಂದರು ಮಾರುಕಟ್ಟೆಯ ಶಾಶ್ವತ ಮತ್ತು ತಾತ್ಕಾಲಿಕ 36 ಸ್ಟಾಲ್ ಗಳು, ಜಪ್ಪು ಮಾರುಕಟ್ಟೆಯ 15 ಸ್ಟಾಲ್‌ಗಳು, ಬೋಳೂರು ಹಳೇ ಮಾರುಕಟ್ಟೆಯ 13 ಸ್ಟಾಲ್‌ಗಳು, ದೇರೆಬೈಲು ಮಾರುಕಟ್ಟೆಯ 13 ಸ್ಟಾಲ್‌ಗಳು, ಕರಂಗಲ್ಪಾಡಿ ಮಾರುಕಟ್ಟೆಯ 10 ಸ್ಟಾಲ್‌ಗಳು, |

| | | | |
|---|---|---|---|
| | | | ನೆಹರೂ ಮೈದಾನ 9 ಸ್ಟಾಲ್‌ಗಳು,ಜೆಪ್ಪು ತಾತ್ಕಾಲಿಕ ಮಾರುಕಟ್ಟೆಯ 21 ಸ್ಟಾಲ್‌ಗಳು, ಜೆಪ್ಪು ತಾತ್ಕಾಲಿಕ ಮೀನು ಮಾರುಕಟ್ಟೆಯ 12 ಸ್ಟಾಲ್‌ಗಳು, ಕಾರ್ ಸ್ಟ್ರೀಟ್ ತಾತ್ಕಾಲಿಕ ಮಾರುಕಟ್ಟೆಯ 30 ಸ್ಟಾಲ್‌ಗಳನ್ನು ಹಿಂದಿನ ಸ್ಟಾಲ್‌ದಾರರಿಗೆ ಮುಂದುವರಿಸಲಾಗಿದೆ.<br><br>ಕಾವೂರು ಮಾರುಕಟ್ಟೆಯ 43 ಸ್ಟಾಲ್‌ಗಳ ಪೈಕಿ 6 ಸ್ಟಾಲ್‌ಗಳ ಹಂಚಿಕೆ ಆಗದೇ ಬಾಕಿ ಇದ್ದು ಮರು ಹರಾಜಿಗೆ ಕ್ರಮ ಕೈಗೊಳ್ಳಲಾಗಿದೆ.<br><br>ಪದವು ಮಾರುಕಟ್ಟೆಯ 10 ಮಳಿಗೆಗಳು, ತಿರುವೈಲ್ ಮಾರುಕಟ್ಟೆಯ 12 ಮಳಿಗೆಗಳು, ನಾಲ್ಯಪದ 3 ಮಳಿಗೆಗಳು, ತಿರುವೈಲ್ ಎಪಿಎಂಸಿ 11 ಮಳಿಗೆಗಳು, ಬಜಾಲ್ 3 ಮಳಿಗೆಗಳು, ಕಣ್ಣೂರು 5 ಮಳಿಗೆಗಳ ಅವಧಿ ಮುಗಿದಿರುವ ಹಿನ್ನೆಲೆಯಲ್ಲಿ ಟೆಂಡರು ಕರೆಯಲಾಗಿದೆ<br><br>ಲಾಲ್‌ಬಾಗ್ ವಾಣಿಜ್ಯ ಸಂಕೀರ್ಣದ 47 ಮಳಿಗೆಗಳು ಅವಧಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದಂತೆ ಆಯುಕ್ತರ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.<br><br>ಕದ್ರಿ ವಾಣಿಜ್ಯ ಸಂಕೀರ್ಣದ 26 ಮಳಿಗೆಗಳ ಅವಧಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು.<br><br>ವೆಲೆನ್ಸಿಯಾ ವಾಣಿಜ್ಯ ಕಟ್ಟಡದ 2 ಮಳಿಗೆಗಳನ್ನು ಹರಾಜು ಮೂಲಕ ಹಂಚಿಕೆ ಮಾಡಲಾಗಿದೆ.<br><br>ಹಂಪನ್ ಕಟ್ಟ ಹಳೇ ಬಸ್ಸು ತಂಗುದಾಣದ ತಾತ್ಕಾಲಿಕ 7 ಅಂಗಡಿ ಮಳಿಗೆಗಳನ್ನು ಹಿಂದಿನ ಮಳಿಗೆದಾರರಿಗೆ ಮುಂದುವರಿಸಲಾಗಿದೆ.<br><br>ಕೇಂದ್ರ ಕಚೇರಿ ಕಟ್ಟಡದ 9 ಮಳಿಗೆಗಳನ್ನು ಹಿಂದಿನ ಬಾಡಿಗೆದಾರರಿಗೆ ಮುಂದುವರಿಸಿ ನೀಡಲಾಗಿದೆ. |

ಸಂಖ್ಯೆ: ನಅಇ 185 ಸಿಎಸ್‌ಎಸ್ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು